# ಗ್ರಂಥಾಲಯ ಕರದ ಉಪಯೋಗ ನಾವೆಷ್ಟು ಪಡೆಯುತ್ತಿದ್ದೇವೆ? *

ಎಂ. ಎಸ್. ಶ್ರೀಧರ್

ನಮ್ಮ ದೇಶದ ೬ ರಾಜ್ಯಗಳಲ್ಲಿ ಸಾರ್ವಜನಿಕ ಗ್ರಂಥಾಲಯ ಕಾಯಿದೆ ಜಾರಿಯಲ್ಲಿದ್ದು, ಇದನ್ನು ೧೯೬೬ ರಷ್ಟು ಹಿಂದೆಯೆ ಅನುಷ್ಠಾನಕ್ಕೆ ತಂದ ಹೆಮ್ಮೆ ಕರ್ನಾಟಕದ್ದು. ಕಾಯಿದೆ ಜಾರಿಯಲ್ಲಿರುವ ರಾಜ್ಯಗಳ ಪೈಕಿ ಮಹರಾಷ್ಟ್ರ, ಒರಿಸ್ಸಾ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಗ್ರಂಥಾಲಯ ಕರ ಸಂಗ್ರಹಿಸುವ ಅವಕಾಶವಿಲ್ಲ. ಉಳಿದಂತೆ ಆಂದ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಶೇ ೬ ಗ್ರಂಥಾಲಯ ಕರವನ್ನು ಭೂಮಿ ಮತ್ತು ವಸತಿ ಕಟ್ಟಡ ಕರದಲ್ಲಿ ಸೇರಿಸಿದ್ದಾರೆ. ಕರ್ನಾಟಕದಲ್ಲಿ ಇತ್ತೀಚನವರೆಗೆ ಶೇ ೩ ಗ್ರಂಥಾಲಯ ಕರವನ್ನು ಸರ್ಚಾರ್ಜ್ ಎಂದು ಭೂಮಿ, ವಸತಿ ಕಟ್ಟಡ, ಆಕ್ಟ್ರಾಯಿ, ಸಾರಿಗೆ ವಾಹನ ಮತ್ತು ವೃತ್ತಿ ತೆರಿಗೆಯ ಮೇಲೆ ವಿಧಿಸಿ ಸರ್ಕಾರ ಸರಿ ಸಮನಾದ ಶೇ ೩ ರಷ್ಟನ್ನ ಸೇರಿಸಿ ಸಾರ್ವಜನಿಕ ಗ್ರಂಥಾಲಯಗಳಿಗೆ ಕೊಡಬೇಕಿತ್ತು. ಅದರೆ ೧೯೯೭ ರಿಂದ ಗ್ರಂಥಾಲಯ ಕರವನ್ನು ದ್ವಿಗುಣಗೊಳಿಸಿ ಶೇ ೬ಕ್ಕೆ ಏರಿಸಲಾಯಿತು. ಭೂ ಕಂದಾಯ ಮನ್ನಾ ಮತ್ತು ಅಕ್ಟ್ರಾಯ್ ರದ್ದಾದ ನಂತರ ಸರ್ಕಾರ ಶೇ ೬ ರ ಅನುದಾನ ಪರಿಹಾರ ಕೊಡುತ್ತಲಿದೆ. ರಾಜ್ಯದಲ್ಲಿ ವರ್ಷಕ್ಕೆ ಸುಮಾರು ೧೨ ಕೋಟಿ ರೂಪಾಯಿಗಳಷ್ಟು ಗ್ರಂಥಾಲಯಕರ ಸಂಗ್ರಹಿಸಲಾಗುತ್ತಿದೆ. ಇದರಲ್ಲಿ ಸುಮಾರು ೯ ಕೋಟಿಯಷ್ಟು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲೇ ಸಂಗ್ರಹಣೆಯಾಗುತ್ತದೆ. ಇದು ಪಾಲಿಕೆಯ ಆಯವ್ಯಯದ ಶೇ. ೧ ಕ್ಕಿಂತ ಕಡಿಮೆಯಿದೆ. ಆದರೆ ಗ್ರಂಥಾಲಯ ಕರದ ರೂಪದಲ್ಲಿ ಸಂಗ್ರಹವಾಗುವ ಕೋಟ್ಯಾಂತರ ರೂಪಾಯಿ ನಗರಪಾಲಿಕೆ/ಸಭೆ, ಪುರಸಭೆ, ಗ್ರಾಮ ಮತ್ತು ಮಂಡಲ ಪಂಚಾಯಿತಿ, ಇತ್ಯಾದಿ ಕರ ಸಂಗ್ರಹಣ ಸಂಸ್ಥೆಗಳಿಂದ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಸಕಾಲಕ್ಕೆ ತಲುಪಿತ್ತಿಲ್ಲ. ಇದಲ್ಲದೆ ಯೋಜನೆ ಮತ್ತು ಯೋಜನೇತರ ೨೧ ಕೋಟಿ ರೂಪಾಯಿಗಳನ್ನು ಸೇರಿಸಿ ಸಾರ್ವಜನಿಕ ಗ್ರಂಥಾಲಯ ಇಲಾಖೆ ಸುಮಾರು ೨೪ ಕೋಟಿ ರೂಪಾಯಿಗಳ ಆಯವ್ಯಯ ಹೊಂದಿದೆ (೨೦೦೨-೦೩). ಇದು ಬೆಂಗಳೂರಿನ ಪ್ರತಿಷ್ಟಿತ ಸಂಸ್ಥೆಯೊಂದು ತನ್ನ ಗ್ರಂಥಾಲಯಕ್ಕೆ ಗ್ರಂಥ ಸಂಗ್ರಹಣೆಗಾಗಿ ಒಂದು ವರ್ಷದಲ್ಲಿ ವ್ಯಯಿಸುವ ಹಣದ ಎರಡು ವರೆಯಷ್ಟು ಇರುವುದರಿಂದ ಅಂಥಹ ಭಾರಿ ಮೊತ್ತವೇನಲ್ಲ. ಸುಮಾರು ೨೦ ಕೋಟಿ ೫೩ ಲಕ್ಷ ರೂಪಾಯಿ ಗ್ರಂಥಾಲಯ ಕರದ ಬಾಕಿ ಗ್ರಂಥಾಲಯಗಳಿಗೆ ಪಾವತಿ ಅಗಬೇಕಿದೆ. ಅದರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯೆ ಶೇ ೧೦ ರಷ್ಟು ಗ್ರಂಥಾಲಯ ಕರವನ್ನು ಸಂಗ್ರಹಣ ವೆಚ್ಚಕ್ಕೆಂದು ಮುರಿದುಕೊಂಡಮೇಲೂ, ಸುಮಾರು ೧೩ ಕೋಟಿ ೬೮ ಲಕ್ಷ ಗ್ರಂಥಾಲಯ ಕರ ಬಾಕಿ ಉಳಿಸಿಕೊಂಡಿದೆ (ಪಟ್ಟಿ ೧ ನೋಡಿ). ಗ್ರಂಥಾಲಯ ಕರ ಪೂರ್ಣವಾಗಿ ಸಕಾಲಕ್ಕೆ ದೊರೆತಿದ್ದರೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಆಯವ್ಯಯ ೩೪ ಕೋಟಿ ರುಪಾಯಿಗೂ ಹೆಚ್ಚು ಇರುತ್ತಿತ್ತು.

**ಪಟ್ಟಿ ೧**

**ಗ್ರಂಥಾಲಯ ಕರದ ಬಾಕಿ (ಲಕ್ಷ ರೂ ಗಳಲ್ಲಿ)**

| | |
|---|---|
| ಬೆಂಗಳೂರು ಮಹಾನಗರ ಪಾಲಿಕೆ | ೧೩೬೮ |
| ನಗರ ಸಭೆಗಳು | ೧೪೬ |
| ಪುರ ಸಭೆಗಳು | ೯೩ |
| ಪಟ್ಟಣ ಪಂಚಾಯಿತಿಗಳು | ೪೭ |
| ಗ್ರಾಮ ಮತ್ತು ಮಂಡಲ ಪಂಚಾಯಿತಿಗಳು | ೩೯೮ |
| ಇತರ ಸಂಸ್ಥೆಗಳು | ೧ |
| ಒಟ್ಟು | ೨೦೫೩ |

ನಮ್ಮ ರಾಜ್ಯದ ೫ ಕೋಟಿ  ೨೭ ಲಕ್ಷ ಜನಸಂಖೆಯಲ್ಲಿ ೩ ಕೋಟಿ  ೪೮ ಲಕ್ಷ ಗ್ರಾಮೀಣವಾಸಿಗಳು (ಶೇ ೬೬) ಮತ್ತು ಅವರಲ್ಲಿ ಅಕ್ಷರಸ್ಥರು ೧ ಕೋಟಿ ೯೧ ಲಕ್ಷ (ಶೇ ೪೮ – ೬೦) . ಈ ಅಕ್ಷರಸ್ಥರಲ್ಲಿ ಚೆನ್ನಾಗಿ ಪುಸ್ತಕ ಓದಬಲ್ಲವರು ಇನ್ನೂ ಕಡಿಮೆ.  ಸ್ವಾಭಾವಿಕವಾಗಿ ಗ್ರಾಮೀಣವಾಸಿಗಳಲ್ಲಿ ಅಕ್ಷರತೆ ಸ್ವಲ್ಪ ಕಡಿಮೆ ಇದ್ದು ಪುಸ್ತಕ ಕೊಳ್ಳುವ ಚೈತನ್ಯವೂ ಈ ಮಂದಿಯಲ್ಲೆ ಗಣನೀಯವಾಗಿ ಕಡಿಮೆ ಇರುವುದರಿಂದ ಗ್ರಾಮೀಣ ಪ್ರದೇಶದ ಶ್ರಿಸಾಮನ್ಯ ಸಾರ್ವಜನಿಕ ಗ್ರಂಥಾಲಯವನ್ನು ನಗರವಾಸಿಗಿಂತ ಹೆಚ್ಚು ಅವಲಂಬಿಸಬೇಕಾಗುತ್ತದೆ. ಆರ್ಥಿಕ ಮುಗಟ್ಟು ಮತ್ತಿತರ ಹಲವಾರು ಕಾರಣಗಳಿಂದಾಗಿ ಸಾರ್ವಜನಿಕ ಗ್ರಂಥಾಲಯ ಸೌಲಭ್ಯ ನಗರವಾಸಿಗಳಿಗೆ ದೊರಕುವ ಮಟ್ಟದಲ್ಲಿ ಗ್ರಾಮೀಣವಾಸಿಗಳಿಗೆ ದೊರಕುತ್ತಿಲ್ಲ ಎಂಬುದು ಒಂದು ವಿಪರ್ಯಾಸ. ಸಾರ್ವಜನಿಕ ಗ್ರಂಥಾಲಯ ಇಲಾಖೆ ಇಲ್ಲಿಯವರೆಗೆ ಅಂದರೆ ಗ್ರಂಥಾಲಯ ಕಾಯಿದೆ (೧೯೬೬) ಅನುಷ್ಠಾನಕ್ಕೆ ಬಂದ ೩೬ ವರ್ಷಗಳಲ್ಲಿ ೨೭೫೧ ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು (ಅಂದರೆ ರಾಜ್ಯದಲ್ಲಿರುವ ೫೬೪೩ ಗ್ರಾಮ ಪಂಚಾಯಿತಿಗಳ ಅರ್ದದಷ್ಟರಲ್ಲಿ) ತೆರೆದಿರುವುದಾಗಿ ಘೋಷಿಸಿದೆ.  ಇದೇ ವೇಗದಲ್ಲಿ ರಾಜ್ಯದ ಎಲ್ಲ ೨೭೦೦೦ ಗ್ರಾಮಗಳೂ ಗ್ರಂಥಾಲಯ ಹೊಂದಲು ಕೇವಲ ೨೮೮  (೩೬ X ೮) ವರ್ಷಗಳು ಸಾಕು ! .  ಇದರಿಂದ ಎಷ್ಟು ಗ್ರಾಮೀಣವಾಸಿಗಳು ಗ್ರಂಥಾಲಯದ ಕನಿಷ್ಠ ಸೇವೆಯಿಂದ ವಂಚಿತರು ಎಂಬುದು ಸ್ಪಷ್ಟ.  ಒಂದು ಅಂತರ ರಾಷ್ಟ್ರೀಯ ಸಂಹಿತೆಯಂತೆ ಪ್ರತಿ ೩೦೦೦ ನಾಗರೀಕರಿಗೆ ಒಂದು ಸಾರ್ವಜನಿಕ ಗ್ರಂಥಾಲಯ ಒಂದು ಮೈಲಿಗಿಂತ ಜಾಸ್ತಿ ದೂರವಿಲ್ಲದಂತೆ ಇರಬೇಕಿದೆ.  ರಷ್ಯಾದಲ್ಲಿ ಸುಮಾರು ೬೭೦ ನಾಗರೀಕರಿಗೆ ಒಂದು ಸಾರ್ವಜನಿಕ ಗ್ರಂಥಾಲಯವಿದೆ.  ಕರ್ನಾಟಕದಲ್ಲಿ ಸೇವಾ ಕೇಂದ್ರಗಳು, ವಾಚನಾಲಯಗಳು, ಪುಸ್ತಕ ವಿತರಣಾ ಕೇಂದ್ರಗಳು ಮತ್ತು ಅನುದಾನಿತ ಗ್ರಂಥಾಲಯಗಳೂ ಸೇರಿದಂತೆ ೩೩೭೮ ಸಾರ್ವಜನಿಕ ಗ್ರಂಥಾಲಯಗಳಿದ್ದು, ಸುಮಾರು ೧೫೬೦೦ ನಾಗರೀಕರಿಗೆ ಒಂದು ಗ್ರಂಥಾಲಯವಿದೆ.

ನಮ್ಮಲ್ಲಿ ಎಷ್ಟು ಮಂದಿ ಸಾರ್ವಜನಿಕ ಗ್ರಂಥಾಲಯಗಳನ್ನು ಬಳಸುತ್ತಾರೆ ಮತ್ತು ಸದಸ್ಯರಿಗೆ ತಲಾ ಎಷ್ಟು ಪುಸ್ತಕಗಳಿವೆ ಎಂದು ಗಮನಿಸಿದರೆ ಆಶ್ಚರ್ಯವಾಗುತ್ತದೆ.  ನಮ್ಮ ಸಾರ್ವಜನಿಕ ಗ್ರಂಥಾಲಯಗಳ ಸದಸ್ಯತ್ವ ಜನಸಂಖ್ಯೆಯ ಶೇ ೧.೩೧ ರಷ್ಟಿದ್ದರೆ, ಅದು ಅಮೇರಿಕಾ ಮತ್ತು ಬ್ರಿಟನ್‌ನಲ್ಲಿ ಕ್ರಮವಾಗಿ ಶೇ ೭೧ ಮತ್ತು ೫೮ ರಷ್ಟಿದೆ.  ಉಳಿದ ಶೇ ೯೮.೬೯ ಮಂದಿ ಗ್ರಂಥಾಲಯ ಕರದ ರೂಪದಲ್ಲಿ ಕೊಡುವ ತೆರಿಗೆ ಹಣದ ಒಂದು ಚಿಕ್ಕಾಸನ್ನು ಉಪಯೋಗಿಸುತ್ತಿಲ್ಲ.  ಅಂದರೆ ಸುಮಾರು ೨ ಕೋಟಿ ೮೫ ಲಕ್ಷ ಅಕ್ಷರಸ್ಥರಲ್ಲಿ ಕೇವಲ ೬ ಲಕ್ಷ ೮೯ ಸಾವಿರ ಮಂದಿ ಸಾರ್ವಜನಿಕ ಗ್ರಂಥಾಲಯದ ಸದಸ್ಯರು. ಮೇಲಾಗಿ, ಭಾರತ ಜಗತ್ತಿನ ಎರಡನೇ ಅತೀ ಹೆಚ್ಚು ಅಕ್ಷರಸ್ಥ ಜನಸಂಖ್ಯೆಯುಳ್ಳ ರಾಷ್ಟ್ರ ಮತ್ತು ಭಾರತದ ಅಕ್ಷರಸ್ಥ ಮಧ್ಯಮ ವರ್ಗ ಅಮೇರಿಕದ ಒಟ್ಟು ಜನಸಂಖ್ಯೆಯಷ್ಟಿದೆ ಎಂಬ ಹೆಗ್ಗಳಿಕೆ ಇರುವವರು ನಾವು. ಆದರೆ ಪ್ರತಿ ನಾಗರೀಕನಿಗೆ ನಮ್ಮ ಗ್ರಂಥಾಲಯ ಮಾಡಿದ ವೆಚ್ಚ, ಗ್ರಂಥಾಲಯ ಬೇಟಿ ಮತ್ತು ಪುಸ್ತಕ ಎರವಲು ಪಡೆದ ಅಂಕಿಅಂಶಗಳನ್ನು ನೋಡಿದರೆ ನಾವು ಎಂತಹ ಅಕ್ಷರಸ್ಥರು/ ವಿದ್ಯಾವಂತರು ಎಂದು ನಾಚಿಕೆ ಪಡಬೇಕು (ಪಟ್ಟಿ ೨ ನೋಡಿ).  ಉದಾಹರಣೆಗೆ, ನಮ್ಮಲ್ಲಿ ಪ್ರತಿ ನಾಗರೀಕನಿಗೆ ಸರಾಸರಿ ೦.೨೨ ಪುಸ್ತಕವಿದ್ದರೆ, ಅಮೆರಿಕ ಮತ್ತು ಬ್ರಿಟನ್ ನಲ್ಲಿ ಪ್ರತಿ ನಾಗರೀಕನಿಗೆ ಸರಾಸರಿ  ೩ ಪುಸ್ತಕಗಳಿವೆ. ಅಂದರೆ ನಮ್ಮಲ್ಲಿ ಹಳೆಯ ಪುಸ್ತಕಗಳನ್ನ ವಿಸರ್ಜಿಸದೆಯೂ

ಸುಮಾರು ೧೫ ಪಟ್ಟು ಹಡಿಮೆ. ಅಂತೆಯೆ, ನಾಗರೀಕರ ಸರಾಸರಿ ಗ್ರಂಥಾಲಯ ಭೇಟಿ ಸುಮಾರು ೫ ಪಟ್ಟು ಮತ್ತು ಸರಾಸರಿ ಎರವಲು ಪಡೆದ ಪುಸ್ತಕಗಳು ಸುಮಾರು ೩ ರಿಂದ ೧೦ ಪಟ್ಟು ಕಡಿಮೆ.

***ಪಟ್ಟಿ ೨***

***ಸಾರ್ವಜನಿಕ ಗ್ರಂಥಾಲಯಗಳ ಸದಸ್ಯತ್ವ, ಪುಸ್ತಕ ಸಂಗ್ರಹಣೆ, ಉಪಯೋಗ ಮತ್ತು ವೆಚ್ಚ***

| ದೇಶ/ ರಾಜ್ಯ | ಸದಸ್ಯತ್ವ (ಜನಸಂಖ್ಯೆಯ ಶೇ) | ಪುಸ್ತಕ ಸಂಗ್ರಹಣೆ * (ಪ್ರತಿ ನಾಗರೀಕನಿಗೆ) | ವಾರ್ಷಿಕ ಉಪಯೋಗ (ಪ್ರತಿ ನಾಗರೀಕನಿಗೆ) | | |
|---|---|---|---|---|---|
| | | | ಎರವಲು | ಗ್ರಂಥಾಲಯ ಬೇಟಿ | ವಾರ್ಷಿಕ ವೆಚ್ಚ |
| ಆಮೇರಿಕ | ೭೧.೪ | ೨.೯ | ೧.೯ | ೪.೩ | ಡಾ. ೬.೪೨ |
| ಬ್ರಿಟನ್ | ೫೮.೦ | ೨.೯ | ೮.೯ | ೫.೪ | ಪೌ. ೪.೭೦ |
| ಕರ್ನಾಟಕ | ೧.೩೧ | ೦.೨೨ | ೦.೭೧ | ೧.೯ | ರೂ. ೪.೫೯ |

* ಹಳೆಯ ಪುಸ್ತಕಗಳನ್ನ ನಿರಂತರವಾಗಿ ವಿಸರ್ಜಿಸುವುದರಿಂದ ಈ ಸಂಖ್ಯೆ ಮುಂದುವರೆದ ದೇಶಗಳಲ್ಲಿ ಸಾದರಣಾವಾಗಿ ಕಡಿಮೆಯಾಗಿರುತ್ತದೆ. ಆದರೆ ಆ ಪದ್ದತಿ ನಮ್ಮಲ್ಲಿಲ್ಲವಾದರು ಈ ಸಂಖ್ಯೆ ತೀರ ಕಡಿಮೆ.

ಇಪ್ಪತ್ತನೆ ಶತಮಾನದ ಆದಿಯಲ್ಲಿ ಅಮೇರಿಕಾದ ವಾಣಿಜ್ಯೋದ್ಯಮಿ ಆಂಡ್ರಿ ಕಾರ್ನಗಿ ಒಬ್ಬನೆ ೨೮೦೦ ಸಾರ್ವಜನಿಕ ಗ್ರಂಥಾಲಯಗಳನ್ನು ಸ್ಥಾಪಿಸಿದ. ಪ್ರಖ್ಯಾತ ಕಂಪ್ಯೂಟರ್ ತಜ್ಞ ಬಿಲ್ಲ್ ಗೇಟ್ಸ್ ಇತ್ತೀಚೆಗೆ ೪೦೦ ಮಿಲಿಯನ್ ಡಾಲರ್ ಅನುದಾನವನ್ನು ಅಮೇರಿಕಾದ ಸಾರ್ವಜನಿಕ ಗ್ರಂಥಾಲಯಗಳಿಗೆ ಕೊಟ್ಟು ಬಹಳ ಹೆಮ್ಮೆಯಿಂದ ಹೇಳಿದ "ಬಹುತೇಕ ಎಲ್ಲರೂ ಈ ಗ್ರಂಥಾಲಯಗಳಿಗೆ ಆಗಿಂದಾಗ್ಯೆ ಭೇಟಿ ಕೊಡುತ್ತಾರೆ ಮತ್ತು ಅಮೇರಿಕಾದ ಅರ್ಧದಷ್ಟು ಜನ ೧೬೦೦೦ ಶಾಖೆಗಳ ಪೈಕಿ ಒಂದು ಅಥವ ಅದಕ್ಕಿಂತ ಹೆಚ್ಚು ಶಾಖೆಗಳನ್ನು ನಿರಂತರ ಬಳಸುತ್ತಾರೆ". ಈ ಹೋಲಿಕೆಯಲ್ಲಿ ನಮ್ಮ ಸಾರ್ವಜನಿಕ ಗ್ರಂಥಾಲಯಗಳದ್ದು ಅದರಲ್ಲೂ ಗ್ರಾಮೀಣ ಗ್ರಂಥಾಲಯಗಳ ಸ್ಥಿತಿ (ಗುಣ ಮಟ್ಟವನ್ನ ಪರಿಗಣಿಸದೆಯೂ) ತುಂಬಾ ಶೋಚನೀಯ. ತರಬೇತಿಯಿಲ್ಲದ ಕೇವಲ ಮಾಸಿಕ ರೂ ೭೫೦ ಗೌರವಧನ ಪಡೆವ ಅರೆಕಾಲಿಕ ಮೇಲ್ವಿಚಾರಕರು, ದಿನಪತ್ರಿಕೆ ಕೊಳ್ಳಲು ತಿಂಗಳಿಗೆ ರೂ. ೧೯೦ ಮತ್ತು ತೀರ ದುರ್ಬಲ ಗ್ರಂಥ ಸಂಗ್ರಹ ಹೊದಿರುವ ತರಾತುರಿಯಲ್ಲಿ ಆರಂಬಿಸಿದ ೨೬೫೧ ಗ್ರಾಮೀಣ ಗ್ರಂಥಾಲಯಗಳ ಸದಸ್ಯತ್ವ, ಉಪಯೋಗ ಮತ್ತಿತರ ಅಂಕಿಅಂಶಗಳನ್ನ ಪ್ರಕಟಿಸಿದರೆ ಪರಿಸ್ಥಿತಿಯ ಗಂಭೀರತೆ ತಿಳಿದೀತು. ಹಲವು ಬಾರಿ ಈ ಗ್ರಂಥಾಲಯಗಳಿಗೆ ವ್ಯಯಿಸುವ ಹಣ ಅದರ ಪ್ರಾರಂಬೋತ್ಸವದ ಸಮಾರಂಬಕ್ಕೆ ಮಾಡಿದ ಖರ್ಚಿಗಿಂತಲೂ ಕಡಿಮೆ ಇರುತ್ತದೆ. ಮುಂದುವರೆದ ದೇಶಗಳ ಸಹಸ್ರಾರು ಸಾರ್ವಜನಿಕ ಗ್ರಂಥಾಲಯ ಸೇವಾ ಕೇಂದ್ರಗಳು ವೈವಿದ್ಯಮಯವಾದ ಪುಕ್ಕಟೆ ಸೇವೆಯನ್ನ ಎಲ್ಲರ ಮನೆಬಾಗಿಲಿಗೆ ಕೊಂಡೊಯ್ಯುವ ಕಾರ್ಯ ವೈಖರಿಯನ್ನ ನೋಡಿದರೆ ನಮ್ಮ ಗ್ರಾಮೀಣ ಗ್ರಂಥಾಲಯಗಳಿಗೆ ಹೋಲಿಸುವುದೂ ಅನುಚಿತವಾಗಿ ತೋರುತ್ತದೆ. ನಿರ್ದಿಷ್ಟ ಜನಸಂಖ್ಯೆಗೆ ನಿರ್ದಿಷ್ಟ ದೂರದೊಳಗೆ ನಿರ್ಮಿಸಿರುವ ಗ್ರಂಥಾಲಯ ಸೇವಾ ಕೇಂದ್ರಗಳು ಮಕ್ಕಳಿಗಾಗಿ ಸಾದರ ಪಡಿಸುವ

*ಮುಂದುವರೆದ ದೇಶಗಳ ಸಹಸ್ರಾರು ಸಾರ್ವಜನಿಕ ಗ್ರಂಥಾಲಯ ಸೇವಾ ಕೇಂದ್ರಗಳು ವೈವಿದ್ಯಮಯವಾದ ಪುಕ್ಕಟೆ ಸೇವೆಯನ್ನ ಎಲ್ಲರ ಮನೆಬಾಗಿಲಿಗೆ ಕೊಂಡೊಯ್ಯುವ ಕಾರ್ಯ ವೈಖರಿಯನ್ನ ನೋಡಿದರೆ ನಮ್ಮ ಗ್ರಾಮೀಣ ಗ್ರಂಥಾಲಯಗಳಿಗೆ ಹೋಲಿಸುವುದೂ ಅನುಚಿತವಾಗಿ ತೋರುತ್ತದೆ.*

ವಿಶೇಷ ಸೇವಾ ಸೌಲಭ್ಯಗಳಿಂದ ಮೊದಲ್ಗೊಂಡು ವೃದ್ದರಿಗಾಗಿ ನಡೆಸುವ ಕಾರ್ಯಕ್ರಮಗಳು ಯಾರನ್ನಾದರು ಬೆರಗುಗೊಳಿಸುವಂತಿವೆ.

ನಮ್ಮಲ್ಲೂ ಡಾ॥ ಕೆ.ಎಸ್. ಉಮಾಪತಿ (ರಾಮಕ್ಕ ಪದ್ಮಕ್ಕ ಸೇವಾನಿಧಿ) ಮತ್ತು ಶ್ರೀಮತಿ ಸುಧಾಮೂರ್ತಿ (Infosys Foundation) ಯವರನ್ನು ಒಳಗೊಂಡಂತೆ ಸಾಕಷ್ಟು ಸಮಾಜ ಸೇವಕರು ಮತ್ತು ದಾನಿಗಳು ಇದ್ದಾರೆ. ಅವರು ಈಗಾಗಲೆ ನೂರಾರು ಗ್ರಾಮೀಣ ಮತ್ತು ಶಾಲಾ ಗ್ರಂಥಾಲಯಗಳ ಸ್ಥಾಪನೆ ಮತ್ತು ಏಳಿಗೆಗೆ ನೆರವಾಗಿ ಸದ್ದು ಗದ್ದಲವಿಲ್ಲದೆ ಗ್ರಂಥಾಲಯ ಚಳುವಳಿ ಆರಂಬಿಸಿದ್ದಾರೆ. Infosys Foundation ೬೫೦೦ ಕ್ಕೂ ಹೆಚ್ಚು ಗ್ರಾಮೀಣ ಶಾಲಾ ಗ್ರಂಥಾಲಯಗಳನ್ನ ಸ್ಥಾಪಿಸಿದ್ದರೆ, ರಾಮಕ್ಕ ಪದ್ಮಕ್ಕ ಸೇವಾನಿಧಿ ಲಕ್ಷಾಂತರ ರೂಪಾಯಿಗಳನ್ನ ಸುಮಾರು ೨೦೦ ಗ್ರಾಮೀಣ ಸಾರ್ವಜನಿಕ ಗ್ರಂಥಾಲಯಗಳಿಗೆ ದೊರಕಿಸಿ ಕೊಟ್ಟಿದೆ. ರಾಮಕ್ಕ ಪದ್ಮಕ್ಕ ದತ್ತಿ ವತಿಯಿಂದ ವಿನೂತನ ರೀತಿಯಲ್ಲಿ ಕಳೆದ ಒಂದು ದಶಕದಲ್ಲಿ ಸ್ಥಾಪನೆಗೊಂಡ ನೂರಾರು ಗ್ರಂಥಾಲಯ ಬಳಗಗಳು ಸ್ಥಳೀಯ ನಾಗರೀಕರನ್ನು ಮತ್ತು ಸಂಸ್ಥೆಗಳನ್ನ ನೇರವಾಗಿ ಪ್ರಚೋದಿಸಿ / ಉತ್ತೇಜಿಸಿ ಈ ಗ್ರಂಥಾಲಯ ಚಳುವಳಿಯಲ್ಲಿ ತೊಡಗಿಸಿ ಶ್ಲಾಘನೀಯ ಕಾರ್ಯವೆಸಗಿದೆ. ಈ ಗ್ರಂಥಾಲಯಗಳಲ್ಲಿ ಸದಸ್ಯತ್ವ ಪುಕ್ಕಟೆ ಮತ್ತು ಯಾವ ರೀತಿಯ ನಿರ್ಬಂದ / ಅಡೆತಡೆಗಳಿಲ್ಲ. ವ್ಯವಸ್ಥೆಯಲ್ಲಿ ಸಾರ್ವಜನಿಕರಿಗೆ ನಂಬಿಕೆ ಬಂದರೆ ತಾವಾಗಿಯೇ ಏನೆಲ್ಲ ಮಾಡಬಲ್ಲರು ಎಂಬುದನ್ನ ಈ ದತ್ತಿ ನಿರೂಪಿಸಿ ತೋರಿಸಿದೆ. ಈ ಗ್ರಂಥಾಲಯ ಬಳಗಗಳ ಪ್ರತಿನಿದಿಗಳು ವಾರ್ಷಿಕ ಸಮಾವೇಶ ನಡೆಸಿ ಪರಸ್ಪರ ಅನುಬವಗಳನ್ನ ವಿನಿಮಯ ಮಾಡಿಕೊಳ್ಳುತ್ತಾರೆ. ಎಷ್ಟೋ ಕಡೆ ಇಂತಹ ದಾನಿಗಳಿಂದ ಮತ್ತು ಸ್ವಯಂಸೇವಾ ಸಂಸ್ಥೆಗಳಿಂದ ಅನುದಾನ ಪಡೆದ ಗ್ರಂಥಾಲಯಗಳು ಸರ್ಕಾರಿ ಗ್ರಾಮೀಣ ಗ್ರಂಥಾಲಯಗಳಿಗಿಂತ ಉತ್ತಮ ಮಟ್ಟದ ಸೇವೆ ಸಲ್ಲಿಸುತ್ತಾ ಸರ್ವಾಜನಿಕ ಗ್ರಂಥಾಲಯಗಳಿಗೆ (ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ) ಒಂದು ಪರ್ಯಾಯ ವ್ಯವಸ್ಥೆಯಾಗಿ ರೂಪುಗೊಳ್ಳುತ್ತಿವೆ. ಮೇಲಾಗಿ, ಈ ಗ್ರಂಥಾಲಯಗಳಿಗಾಗಿ ನಾವು ಯಾವ ಕರವನ್ನೂ ತೆರುತ್ತಿಲ್ಲ.

---------------------------------------------------------------------------------------------------

* *ವಿಜಯ ಕರ್ನಾಟಕ*, ಮೇ ೪, ೨೦೦೩, ಪು. ೫. (How much use of library cess being made by us? *Vijaya Karnataka*, May 4, 2003, p5).

## ಲೇಖಕರ ವಿವರ



ಡಾ. ಎಂ ಎಸ್ ಶ್ರೀಧರ್‌ರವರು ಗಣಿತ ಹಾಗೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ಎರಡೂ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಅವರು ಕಳೆದ ೩೫ ವರ್ಷಗಳಿಂದ ಗ್ರಂಥಾಲಯ ಕ್ಷೇತ್ರದಲ್ಲಿದ್ದು, ೧೯೭೮ ರಿಂದ ಇಸ್ರೋ ಉಪಗ್ರಹ ಕೇಂದ್ರದ ಗ್ರಂಥಾಲಯ ಮತ್ತು ಪ್ರಲೇಖನ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೂ ಮುನ್ನ ಎನ್ ಎ ಎಲ್, ಐ ಐ ಎಂ (ಬೆಂಗಳೂರು) ಹಾಗೂ ಮೈಸೂರು ವಿಶ್ವ ವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವವಿದೆ.

ಡಾ. ಶ್ರೀಧರ್‌ರವರು ನಾಲ್ಕು ಪುಸ್ತಕಗಳು ಹಾಗೂ ೭೪ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ, ಹಾಗೂ ವಿವಿಧ ಪುಸ್ತಕಗಳಿಗಾಗಿ ೫ ಪಠ್ಯಗಳನ್ನೂ ಬರೆದಿದ್ದಾರೆ. ಮುಕ್ತ ವಿಶ್ವವಿದ್ಯಾನಿಲಯದ ಗ್ರಂಥಾಲಯ ವಿಜ್ಞಾನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಪಠ್ಯ ಸಾಮಾಗ್ರಿಯನ್ನು ರಚಿಸಿದ್ದು, ಇದಲ್ಲದೆ ಸುಮಾರು ೨೨ ಲೇಖನಗಳನ್ನು ವಿವಿಧ ಸಮ್ಮೇಳನಗಳಲ್ಲಿ ಮಂಡಿಸಿದ್ದಾರೆ.

E-mail: sridharmirle@yahoo.com, mirlesridhar@gmail.com, sridhar@isac.gov.in ; Phone: 91-80-25084451; Fax: 91-80-25084475.